

ನಿಜಗಲ್ ಬೆಟ್ಟದ ಮೇಲಿಂದ ದೂರ ದಿಗಂತದಲ್ಲಿ ಕಾಣುತ್ತಿರುವ ಶಿವಗಂಗೆ ಬೆಟ್ಟ

ಆಳ್ವಿಕೆಗೆ ಒಳಪಟ್ಟಿದ್ದು, ನೂರೆಂಟು ಕೋಟೆಗಳನ್ನು ಕಾಪಾಡಿ ಸಂರಕ್ಷಿಸುವುದು ಬ್ರಿಟಿಷರಿಗೆ ಬಲು ದುಬಾರಿಯದಾಗಿ, ಒಂದೊಂದೇ ಕೋಟೆಯನ್ನು ತ್ಯಜಿಸತೊಡಗಿದರು. ಮೆಲ್ಲನೆ ಅದೆಷ್ಟೋ ಕೋಟೆಗಳಂತೆ ಸುರಗಿರಿ ದುರ್ಗವೂ ಪಾಳುಬಿದ್ದು ಇತಿಹಾಸದ ಪುಟಗಳಿಗೆ ಜಾರಿತು.

ಈಗ ಬೆಟ್ಟದ ಮತ್ತಷ್ಟು ಮೇಲಿನ ಹಂತಕ್ಕೆ ತಲುಪಲು, ನಾನು ದೇವಾಲಯದಿಂದ ದಕ್ಷಿಣದ ದ್ವಾರಕ್ಕೆ ಹಿಂತಿರುಗಿ ಕೊಳವನ್ನು ಬಳಸಿ ಹೊರಟೆ; ಮೊದಲಿಗೆ ಒಂದು ದರ್ಗಾ ಕಂಡಿತು. ಈಗ ಅತಿ ಜಾಗರೂಕವಾಗಿ ನಂತರದ ಹಂತವನ್ನು ಹತ್ತಿ ಮೇಲೆ ಬಂದಾಗ, ಅಲ್ಲಿ ಒಂದು ಗುಹೆಯಲ್ಲಿ ಸಣ್ಣ ಶಿವಾಲಯ ಕಂಡಿತು. ಸ್ಥಳೀಯರು ವಿಶೇಷ ದಿನಗಳಲ್ಲಿ ಇಲ್ಲಿ ಬಂದು ಪೂಜೆ ಸಲ್ಲಿಸುತ್ತಾರೆ. ಇದರ ಬಳಿಯೇ ಬಂಡೆಗಳ ನಡುವಿನ ಕಿರಿದು ಜಾಗದಲ್ಲಿ ಎರಡನೆಯ ದರ್ಗಾ ಕೂಡ ಇದೆ. ಇವುಗಳ ಬಳಿಯೇ ಬಂಡೆಯ ಕೊರಕಲಲ್ಲಿ ಒಂದು ಸಣ್ಣ ಕೊಳವಿದೆ, ಅದನ್ನು 'ಸಿದ್ಧರ ದೋಣಿ' ಎಂದು ಕರೆಯುತ್ತಾರೆ.


ಮೊದಲ ಚಾರಣದ ನಂತರ ಅನೇಕ ಬಾರಿ ಈ ಬೆಟ್ಟ ಹತ್ತಿರುವೆ. ಈ ಪುಟ್ಟ ಕಲ್ಲಿನ ಕೊಳದಲ್ಲಿ ಸದಾ ನೀರು ಇರುವುದನ್ನು ಕಂಡಿದ್ದೇನೆ, ಬೆಟ್ಟದ ಮೇಲಿನ ಕೋತಿಗಳು ಇಲ್ಲಿ ನೀರು ಕುಡಿಯುತ್ತವೆ. ಈ ನೀರನ್ನು ಮಂದಿರ, ದರ್ಗಾಕ್ಕೆ ಬರುವ ಎಲ್ಲ ಮತದ ಜನರೂ ಬಳಸುತ್ತಾರೆ. ಈ ಎರಡು ದರ್ಗಗಳನ್ನು, ಹಜರತ್ ಸಯ್ಯದ್ ಪಾಶಾ ಮತ್ತು ಹಜರತ್ ಸಯ್ಯದ್ ಕರೀಮ್ ಎಂಬ ಇಬ್ಬರು ಸಹೋದರರು ಕಟ್ಟಿಸಿದರು ಎನ್ನಲಾಗುತ್ತದೆ. ಮೈಸೂರಿನ ಪುರಾತತ್ವ ಸಂಶೋಧನೆಯ 1914–15ರ ವರದಿ, 'ನಿಜಗಲ್ ಹಿಂದೂಗಳಿಗೂ ಮೊಹಮಡನ್ನರಿಗೂ ಪವಿತ್ರವಾದ ಸ್ಥಳ, ಬೆಟ್ಟದ ಶಿಖರದಲ್ಲಿ ಅವರ ಪೂಜಾಸ್ಥಳಗಳು ಅಕ್ಕಪಕ್ಕದಲ್ಲಿವೆ' ಎಂದು ದಾಖಲಿಸಿದೆ.

ಮತ್ತಷ್ಟು ಮೇಲೆ ಏರಿದಾಗ, ಬೆಟ್ಟದ ತುತ್ತತುದಿಯಲ್ಲಿ ನಿಂತಿದ್ದೆ. ಈ ಎತ್ತರದಲ್ಲಿ ಸುತ್ತಲಿನ ಪರಿಸರದ ನೋಟ ಮನಮೋಹಕವಾಗಿತ್ತು. ಇಲ್ಲೊಂದು ಕಲ್ಲಿನ ಮೇಲೆ ಏರಿ, ಮುಗಿಲು ಮುಟ್ಟಿ ನಿಂತಂತೆ ಇಡೀ ವಾತಾವರಣ ಪ್ರಶಾಂತವಾಗಿ ಮಲಗಿತ್ತು. ಅದೆಷ್ಟೋ ಕಾಳಗಗಳನ್ನು ಕಂಡ ಈ ಯುದ್ಧಭೂಮಿಯಲ್ಲಿ ಕಡೆಗೂ ಕದನವಿರಾಮ. ಶಾಂತಿಯನ್ನು ಅರಸಿ ಬಂದ ಸಿದ್ಧರಿಗೂ ನೆಲೆಕೊಟ್ಟ ತಾಣವಿದು. ಬೆಟ್ಟದ ಈ ತುದಿಯಲ್ಲಿ ಪ್ರಕೃತಿ ಸಹಜವಾಗಿ ರೂಪುಗೊಂಡ ಅನೇಕ ಗುಹೆಗಳಿವೆ. ಸ್ಥಳೀಯ ದಂತಕತೆಗಳು, ಇಲ್ಲಿ ಅನೇಕ ಸಂತರು ತಪಸ್ಸು ಮಾಡಿದ್ದರೆಂದೂ, ಅದೇ ಕಾರಣಕ್ಕೆ ಈ ಬೆಟ್ಟಕ್ಕೆ 'ಸಿದ್ಧರ ಬೆಟ್ಟ' ಎಂದೂ ಹೆಸರಿರುವುದನ್ನು ತಿಳಿಸುತ್ತವೆ. ಚನ್ನರಾಯನದುರ್ಗದ ಬಳಿ ಇರುವ ಮತ್ತೊಂದು ಸಿದ್ಧರ ಬೆಟ್ಟವನ್ನು ಹತ್ತಿದ್ದೆ, ಅಲ್ಲಿಯೂ ಇದೇ ಬಗೆಯಲ್ಲಿ ಬಂಡೆಗಳ ನಡುವಿನ ಗುಹೆಗಳಲ್ಲಿ ಸಿದ್ಧ ಪುರುಷರು ಧ್ಯಾನ ಮಾಡಿದ ವಿಚಾರ ತಿಳಿಸಿದ್ದರು.

ಇದೀಗ ಬೆಟ್ಟದಿಂದ ಇಳಿಯಲು, ಬೇರೊಂದು ಹಾದಿ ಹಿಡಿದು ಪೂರ್ವದ ದ್ವಾರದಿಂದ ಹೊರಬರಲು ಹೊರಟೆ. ಈ ಹಾದಿಯಲ್ಲಿ ಒಂದು ದೊಡ್ಡ ಬಂಡೆಯ ಪಾರ್ಶ್ವದಲ್ಲಿ 3 ಅಡಿಯಷ್ಟು ಎತ್ತರದ ಹನುಮಂತನ ದೊಡ್ಡ ವಿಗ್ರಹವನ್ನು ಕೆತ್ತಿದ್ದರು. ಸಾಕಷ್ಟು ಪುರಾತನವಾದ ಕೆತ್ತನೆ ಇದು. ಮತ್ತಷ್ಟು ಕೆಳಗಿಳಿದು ಬಂದಂತೆ, ಎರಡು ಜೋಡಿ ಬಂಡೆಗಳ ಮೇಲೆ ಆಂಜನೇಯ ಮತ್ತು ಗಣೇಶ ದೇವರ ಕೆತ್ತನೆಗಳಿದ್ದವು. ಅಂಜನೇಯನ ಬಾಲದಲ್ಲಿ ಒಂದು ಸಣ್ಣ ಗಂಟೆಯನ್ನು ಕೆತ್ತಲಾಗಿತ್ತು.

ಸುರಗಿರಿಗೆ ಅತ್ಯುತ್ತಮ 'ಟ್ರೆಕ್–ರೂಟ್' ಎಂದರೆ, ರೈಲ್ವೆ ಅಂಡರ್‌ಪಾಸ್‌ನಿಂದ ಹಾಯ್ದು, ಬೆಟ್ಟದ ಬುಡಕ್ಕೆ ತಲುಪಿ, ಗದ್ದೆಗಳ ಹಾಗೂ ಬಂಡೆಗಳ ಉದ್ದಕ್ಕೂ ಬಲಗಡೆಯಿಂದ ಪ್ರದಕ್ಷಿಣೆ ಹಾಕಿದಂತೆ ಸಾಗಿದರೆ ಎತ್ತರದಲ್ಲಿ 'ದಕ್ಷಿಣ ದ್ವಾರ' ಕಾಣಿಸುತ್ತದೆ. ಇಲ್ಲಿಂದ ಬಂಡೆಗಳ ಮೇಲೆ ಹೊಸದಾಗಿ ಕೆತ್ತಿರುವ ಮೆಟ್ಟಿಲುಗಳನ್ನು ಬಳಸಿ ಮೇಲೇರಿದರೆ, ಕೋಟೆಯ ಮೊದಲ ಹಂತಕ್ಕೆ ಬರುತ್ತೇವೆ. ಇಲ್ಲಿಂದ ಮುಂದೆ ಗಿಡಮರ ಪೊದರುಗಳು, ಕಡಿದಾದ ಇಳಿಜಾರು ಪ್ರದೇಶಗಳನ್ನು, ಬಂಡೆಗಳನ್ನು ಎಚ್ಚರಿಕೆಯಿಂದ ಹಾಯ್ದು ಮೇಲೇರಿದರೆ ಶಿಖರಕ್ಕೆ ಮುಟ್ಟುತ್ತೇವೆ.

ಇಲ್ಲಿಯ ವಿಹಂಗಮ ನೋಟದಲ್ಲಿ ನಮಗೆ ಪರಿಚಿತವಿರುವ ಶಿವಗಂಗೆ ಬೆಟ್ಟ, ಮಂದಾರಗಿರಿ, ರಾಮದೇವರ ಬೆಟ್ಟಗಳು ಕಾಣುವುದಲ್ಲದೆ, ರೈಲು ಹಳಿಗಳು, ಹೆದ್ದಾರಿಯೊಡನೆ ಇಲ್ಲಿ ಕೂಡಿ, ಅಲ್ಲಿ ಬೇರ್ಪಡುವ ದೃಶ್ಯವೂ ಕಾಣಸಿಗುತ್ತದೆ. ಇಳಿಯುವಾಗ ಪೂರ್ವ ದ್ವಾರದಿಂದ ಹೊರಬರುವ ಹಾದಿಯನ್ನು ಹಿಡಿದು ಬಂದಂತೆ, ಮತ್ತಷ್ಟು ಮೋಹಕ ದೃಶ್ಯಗಳು ಕಣ್ಣಿಗೆ ಬೀಳುತ್ತವೆ. ಚಾರಣಿಗರು ಮತ್ತು ಬಂಡೆ ಹತ್ತುವ ಉತ್ಸಾಹಿಗಳು ಬಯಸುವ ಸಾಹಸಗಳಿಗೆಲ್ಲ ಈ ಬೆಟ್ಟ ವೇದಿಕೆಯಂತಿದೆ.



ಬಂಡೆ ಮೇಲೆ ಆಂಜನೇಯ ಸ್ವಾಮಿಯ ಕೆತ್ತನೆ

ಇಂಗ್ಲಿಷ್‌ನಿಂದ ಕನ್ನಡಕ್ಕೆ: ನೇಮಿಚಂದ್ರ

ಪ್ರತಿಕ್ರಿಯಿಸಿ: feedback@sudha.co.in